ಅಭಿವೃದ್ಧಿ ಸಚಿವರು) ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಎಷ್ಟು ಕಡೆ ಸಮುದ್ರ ಕೊರೆತಗಳಾಗಿವೆ?

ಆ) ಉಳ್ಳಾಲದಲ್ಲಿ ಸಮುದ್ರ ಕೊರೆತದಿಂದಾಗಿ ಎಷ್ಟು ಮನೆಗಳಿಗೆ ಹಾನಿಯಾಗಿದೆ?

ಇ) ಇದರಲ್ಲಿ ಈ ಮೊದಲೇ ಕಡಲ್ಕೊರತದಿಂದಾಗಿ ಮನೆ ಕಳೆದುಕೊಂಡು ಸರ್ಕಾರದಿಂದ ಪರಿಹಾರ ಪಡೆದು, ಪುನಃ ಸಮುದ್ರ ಬದಿಯಲ್ಲಿಯೇ ವಾಸ್ತವ್ಯ ಹೂಡಿ ಸರ್ಕಾರದವರ ಸವಲತ್ತುಗಳನ್ನು ದುರುಪಯೋಗ ಮಾಡಿರುವ ವಿಷಯ ಸರ್ಕಾರದವರ ಗಮನಕ್ಕೆ ಬಂದಿದೆಯೇ?

ಈ) ಪ್ರಸ್ತುತ ಸಮುದ್ರ ಕೊರೆತದಿಂದ ನಿರಾಶ್ರಿತರಾದವರಿಗೆ ಮನೆ ನಿವೇಶನ ಒದಗಿಸಲಾಗಿದೆಯೇ (ವಿವರ ನೀಡುವುದು)

ಉ) ಈ ನಿರಾಶ್ರಿತರಿಗೆ ಮನೆ ನಿವೇಶನ ಒದಗಿಸಲು ಇಲಾಖೆಯವರು ಮುನ್ನೂರು ಮತ್ತು ಆಬ್ಲ ಮೊಗರು ಗ್ರಾಮಗಳಲ್ಲಿ ಕೃಷಿಕರ ಪಟ್ಟಾ ಜಮೀನಿನ ಕುಮ್ಮಿ ಹಕ್ಕನ್ನು ನಿಯಮಾವಳಿ ಮೀರಿ ಬಲಾತ್ಕಾರವಾಗಿ ಮರುರಚಿಸಿರುವುದು ನಿಜವೆ?

ಊ) ಹಾಗಿದ್ದಲ್ಲಿ ಈ ವಿಷಯದಲ್ಲಿ ಸರ್ಕಾರದವರು ಕೈಗೊಳ್ಳಲಿರುವ ಕ್ರಮಗಳೇನು?

ಶ್ರೀ ತಿಪ್ಪೇಸ್ವಾಮಿ (ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಸಚಿವರು):-

ಅ) 1996ರ ಸಾಲಿನ ಮುಂಗಾರಿನಲ್ಲಿ ದಕ್ಷಿಣ ಕನ್ನಡ ಜಿಲ್ಲೆಯ ಉಳ್ಳಾಲ, ಬಡಾಉಚ್ಚಿಲ, ಕೂಡಿ ಬೆಂಗ್ರೆ, ಪೋಲಿಪು ಪಡು, ಮಾಳೂರುಗಳಲ್ಲಿ ಸಮುದ್ರ ಕೊರೆತ ಉಂಟಾಗಿದೆ.

ಆ) 40 ಮನೆಗಳಿಗೆ ಹಾನಿಯಾಗಿದೆ.

ಇ) ಇಲ್ಲ.

ಈ) ಬಂಟ್ವಾಳ ತಾಲ್ಲೂಕು ನರಿಂಗಾನ ಗ್ರಾಮದಲ್ಲಿ ನಿರಾಶ್ರಿತರಿಗೆ ಒಟ್ಟು 35 ಮನೆ ನಿವೇಶನಗಳನ್ನು ರಚಿಸಿದ್ದು, ಇದರಲ್ಲಿ 23 ಸಂತ್ರಸ್ತರಿಗೆ ಈಗಾಗಲೇ ನಿವೇಶನ ನೀಡಲಾಗಿದೆಯೆಂದು ಕಂದಾಯ ಇಲಾಖೆ ತಿಳಿಸಿದೆ.

ಉ) ನಿಜವಲ್ಲ.

ಊ) ಪ್ರಶ್ನೆ ಉದ್ಭವಿಸುವುದಿಲ್ಲ.

ಅಧ್ಯಕ್ಷರು:- ಮಂಡಿಸಲಾಯಿತು.

3. ಪ್ರಕಟಣೆ.

ಅಧ್ಯಕ್ಷರು:- ವಿಧಾನ ಪರಿಷತ್ತಿನ ಮಾನ್ಯ ಸಭಾಪತಿಯವರಿಂದ ಈ ಕೆಳಕಂಡ

ಸಂದೇಶವು ಬಂದಿರುತ್ತದೆ.

''ದಿನಾಂಕ 31.8.1995ರಂದು ರಚಿಸಲಾದ ರಾಜ್ಯದಲ್ಲಿ ಗ್ರಾನೈಟ್ ಪ್ರಕರಣಕ್ಕೆ ಸಂಬಂಧಿಸಿದಂತೆ ಸಮಗ್ರವಾದ ತನಿಖೆಯನ್ನು ನಡೆಸಿ ಸಮತಿಯು ತನ್ನ ವರದಿಯನ್ನು ಸಲ್ಲಿಸಲು ವಿಧಾನಪರಿಷತ್ತು 1996ರ ಸೆಪ್ಟೆಂಬರ್ ಅಂತ್ಯದವರೆಗೆ ಕಾಲಾವಕಾಶವನ್ನು ವಿಸ್ತರಿಸಲು ತನ್ನ ಸಹಮತಿಯನ್ನು ನೀಡಿದೆ ಎಂದು ಈ ಮೂಲಕ ತಿಳಿಸುತ್ತಿದ್ದೇನೆ''

ಅಧ್ಯಕ್ಷರು:- ಮಾನ್ಯ ಸದಸ್ಯರುಗಳಾದ ಡಿ.ಬಿ.ಇನಾಂದಾರ್‌ರವರು ಮತ್ತು ಶ್ರೀರಂಗದೇವರಾಯಲು ಅವರು ಅವರ ಮತ ಕ್ಷೇತ್ರದಲ್ಲಿ ಹೈಸ್ಕೂಲ್ ವಿಚಾರದಲ್ಲಿ ಆಗಿರುವಂತಹ ತೊಂದರೆ ಬಗ್ಗೆ ಪ್ರಸ್ತಾಪ ಮಾಡಿದಿರಿ. ನಾನು ಆ ಬಗ್ಗೆ ಸಂಬಂಧಿಸಿದ ಸಚಿವರ ಜೊತೆಗೆ ಮಾತನಾಡಿದ್ದೇನೆ. ತಾವಿಬ್ಬರೂ ದಯಮಾಡಿ ಇವತ್ತು ಮಧ್ಯಾಹ್ನ 3 ಗಂಟೆ ಸಮಯದಲ್ಲಿ ನನ್ನ ಕಛೇರಿಯಲ್ಲಿ ನನ್ನನ್ನು ಭೇಟಿಯಾಗಬೇಕೆಂದು ವಿನಂತಿ ಮಾಡಿಕೊಳ್ಳುತ್ತಿದ್ದೇನೆ. ಇನ್ನು ಮಾನ್ಯ ಆಹಾರ ಸಚಿವರಿಗೆ ನಾನೊಂದು ಸೂಚನೆಯನ್ನು ಕೊಡಬಯಸುತ್ತೇನೆ. ಮೊನ್ನೆ ಶೂನ್ಯ ವೇಳೆಯಲ್ಲಿ ಸೋಮವಾರ ಪೇಟೆಯ ಕ್ಷೇತ್ರದ ಶಾಸಕರಾದ ಶ್ರೀಮಾನ್ ಅಪ್ಪಚ್ಚು ರಂಜನ್‌ರವರು ಕಳಪೆ ಮಟ್ಟದ ಅಕ್ಕಿಯನ್ನು ವಿತರಣೆ ಮಾಡಿದ್ದಾರೆ ಎಂದು ಹೇಳಿ, ಅಕ್ಕಿಯನ್ನು ಸದನದಲ್ಲಿ ಪ್ರದರ್ಶನ ಮಾಡಿದರೆ, ನಿಮ್ಮ ಅಧಿಕಾರಿಗಳು ಆ ಅಂಗಡಿಯವನ ಲೈಸೆನ್ಸ್ ಅನ್ನು ಕ್ಯಾನ್ಸಲ್ ಮಾಡಿದ್ದಾರೆ. ನೀವು ಯಾವ ರೀತಿಯಾದ ಅಕ್ಕಿಯನ್ನು ಅಂಗಡಿಯವನಿಗೆ ಸಪ್ಲೈ ಮಾಡುತ್ತೀರೋ, ಅಂತಹ ಅಕ್ಕಿಯನ್ನು ಅಂಗಡಿಯವನು ಮಾರುತ್ತಾನೆ. ಅಂಗಡಿಯವನೇ ಅಕ್ಕಿಯನ್ನು ಕೊಂಡು ತಂದು ಮಾರುತ್ತನೆಯೇ? ಮಾನ್ಯ ಶಾಸಕರು ಇಲ್ಲಿ ಪ್ರಸ್ತಾಪ ಮಾಡಿದ ವಿಷಯಕ್ಕೆ ಸಂಬಂಧಪಟ್ಟಂತೆ ಯಾರು ನಿಮ್ಮ ಇಲಾಖೆಯ ಅಧಿಕಾರಿ ವಿವೇಚನೆ ಇಲ್ಲದೇ ಅಂಗಡಿಯವನ ಲೈಸೆನ್ಸ್ ಅನ್ನು ಕ್ಯಾನ್ಸಲ್ ಮಾಡಿದ್ದಾರೆ, ಇದು ಮಹಳ ದುಬಾರಿ ವರ್ತನೆಯಾಯಿತು, ತಕ್ಷಣ ಆ ಅಧಿಕಾರಿಯನ್ನು ಅಮಾನತ್ತಿನಲ್ಲಿ ಇಡಬೇಕೆಂದು ನಾನು ಮಾನ್ಯ ಆಹಾರ ಮಂತ್ರಿಗಳಿಗೆ ಸೂಚನೆ ಕೊಡುತ್ತಿದ್ದೇನೆ.

+ ಶ್ರೀ ಬಿ.ಎಸ್.ಯಡಿಯೂರಪ್ಪ:- ಮಾನ್ಯ ಅಧ್ಯಕ್ಷರೇ, ತಾವು ಸೂಕ್ತವಾದಂತಹ ಸಲಹೆಯನ್ನು ಕೊಟ್ಟಿದ್ದೀರಿ. ಈ ರೀತಿಯಾದಂತಹ ಲೋಪದೋಷಗಳನ್ನು ಎತ್ತಿ ತೋರಿಸಲಿಕ್ಕೇ ನಾವಿಲ್ಲಿ ಇರುವಂಥಾದ್ದು. ಅಂಗಡಿಯವನು ಏನು ಶಾಸಕರಿಗೆ ಅಕ್ಕಿಯನ್ನು ಸಪ್ಲೈ ಮಾಡಿರುವುದಿಲ್ಲ. ಶಾಸಕರು ತಮಗೆ ಕಂಡದ್ದನ್ನು ಇಲ್ಲಿ ಪ್ರಸ್ತಾಪ ಮಾಡಿದ್ದಾರೆ. ಮಾನ್ಯ ಬಸವಣ್ಣೆಪ್ಪನವರೇ, ತಮ್ಮ ಇಲಾಖೆಯ ಬೇರೆ ಅಧಿಕಾರಿಗಳೂ ಈ ರೀತಿಯ ಪ್ರವೃತ್ತಿ ತೋರಿದರೆ ಬಹಳ ಕಷ್ಟವಾಗುತ್ತದೆ.

ಅಧ್ಯಕ್ಷರು:- ನಾನೇನು ಹೇಳುತ್ತೇನೆ ಎಂದರೆ, ಇದು ಶಾಸನ ಸಭೆ. ಇದರ ಪಾವಿತ್ರತೆಯನ್ನು ಕಾಪಾಡುವುದಕ್ಕೆ ತಾವೆಲ್ಲರೂ ಸಹಕರಿಸಿ. ಪ್ರತಿ ಕ್ಷಣದಲ್ಲೂ ಸಹ ನಾವು ಈ ಕೆಲಸವನ್ನು ಮಾಡೋಣ. ಮಾನ್ಯ ಶಾಸಕರು ಪ್ರಸ್ತಾಪ ಮಾಡಿದಂತಹ ಒಂದು ವಿಚಾರದ ಬಗ್ಗೆ ಆ ಅಧಿಕಾರಿ ಆ ರೀತಿ ನಡೆದುಕೊಂಡರೆ, ನಾನು ಆ ರೀತಿ ಆಗುವುದಕ್ಕೆ